# ನೊಬೆಲ್ ಪಡೆದ ಓಲ್ಗಾ

**2018**ರ ಸಾಲಿಗೆ ನೀಡಬೇಕಾಗಿದ್ದ 'ನೊಬೆಲ್ ಪ್ರಶಸ್ತಿ'ಗಳನ್ನು 2019ರ ಕೊನೆಯಲ್ಲಿ ಘೋಷಿಸಲಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಪೋಲೆಂಡ್‌ನ ಓಲ್ಗಾ ಟೋಕರ್‌ಜುಕ್ ಎಂಬ ಹೆಣ್ಣುಮಗಳು, ಆಸ್ಟ್ರಿಯಾದ ಪೀಟರ್ ಹಂಡ್ಕೆ ಜೊತೆಗೆ ನೊಬೆಲ್ ಪ್ರಶಸ್ತಿಯನ್ನು ಜಂಟಿಯಾಗಿ ಗೆದ್ದುಕೊಂಡಿದ್ದಾರೆ. ಇವರಿಬ್ಬರಲ್ಲಿ ಪೀಟರ್ ಹಂಡ್ಕೆಗೆ ಪ್ರಶಸ್ತಿ ಸಿಕ್ಕಿದ್ದು ವಿವಾದದ ಅಲೆಗಳನ್ನು ಸೃಷ್ಟಿಸಿದೆ. ಐದು ವರ್ಷಗಳ ಹಿಂದೆ, 'ಅಪಾತ್ರರಿಗೆಲ್ಲ ನೊಬೆಲ್ ಸಿಗುತ್ತಿದೆ. ಈ ನೊಬೆಲ್ ಪ್ರಶಸ್ತಿಗಳನ್ನೇ ರದ್ದು ಮಾಡಬೇಕು' ಎಂದು ಆವಾಜ್ ಹಾಕಿದ್ದ ಪೀಟರ್‌ಗೇ ಈ ಸಲ ನೊಬೆಲ್ ಪ್ರಶಸ್ತಿ ಘೋಷಿಸಲಾಗಿದೆ. ಪೀಟರ್ ವಿರೋಧಿಗಳೆಲ್ಲ ಈಗ ಗಟ್ಟಿಧ್ವನಿ ಹೊರಡಿಸಿ, 'ನೊಬೆಲ್ ಪ್ರಶಸ್ತಿ ಬಗ್ಗೆ ಹಿಂದೆ ಪೀಟರ್ ಹೇಳಿದ್ದು ಈ ವರ್ಷ ನಿಜವಾಗಿದೆ' ಎಂದು ವ್ಯಂಗ್ಯವಾಡಿದ್ದಾರೆ!

ಪೀಟರ್‌ಗೆ ಹೋಲಿಸಿದರೆ, ಓಲ್ಗಾ ಎಂಬ 57ರ ಹರೆಯದ ಸ್ತ್ರೀವಾದಿಯ ಆಯ್ಕೆಯ ಬಗ್ಗೆ ಅಷ್ಟು ತಕರಾರುಗಳಿಲ್ಲ. ಪೋಲೆಂಡಿನ ಅತ್ಯಂತ ಜನಪ್ರಿಯ ಲೇಖಕಿ ಈಕೆ. ಎರಡು ಬಾರಿ ತಮ್ಮ ಕೃತಿಗೆ ಪೋಲೆಂಡಿನ ಅತ್ಯಂತ ಪ್ರತಿಷ್ಠಿತ 'ದಿ ನೈಕ್' ಪ್ರಶಸ್ತಿ ಗೆದ್ದುಕೊಂಡಿರುವ ಈಕೆಯ ಕೃತಿಗಳ ಬಗ್ಗೆ ಇತ್ತೀಚೆಗಷ್ಟೇ ಇಂಗ್ಲಿಷ್ ಸಾಹಿತ್ಯ ಲೋಕ ಕಣ್ಣುಬಿಟ್ಟು ನೋಡತೊಡಗಿದೆ. ಅದಕ್ಕೆ ಕಾರಣ ಈಕೆಯ ಕೃತಿಗಳು ತಡವಾಗಿಯಾದರೂ ಇಂಗ್ಲಿಷ್‌ಗೆ ಅನುವಾದಗೊಳ್ಳಲು ತೊಡಗಿದ್ದು. **'Drive your plow'** ಎನ್ನುವ ಈಕೆಯ ಕೃತಿ 10 ವರ್ಷಗಳ ಬಳಿಕ ಇಂಗ್ಲಿಷ್‌ಗೆ ಬಂತು. ಈಕೆ 2007ರಲ್ಲಿ ಪೋಲಿಶ್ ಭಾಷೆಯಲ್ಲಿ ಪ್ರಕಟಿಸಿದ ಆರನೇ ಕಾದಂಬರಿ **'Flights'**ಗೆ ಕಳೆದ ವರ್ಷ 'ಬೂಕರ್ ಇಂಟರ್‌ನ್ಯಾಷನಲ್ ಬಹುಮಾನ' ಸಿಕ್ಕಿತ್ತು. ಹೋರಾಟಗಾರ್ತಿ, ಸಾರ್ವಜನಿಕ ವಲಯದ ಬುದ್ಧಿಜೀವಿ ಎನ್ನಿಸಿಕೊಂಡಿರುವ ಓಲ್ಗಾ, ರಾಜಕೀಯಕ್ಕೆ ಸಂಬಂಧಿಸಿಯೂ ತನ್ನ ವಿಚಾರಗಳನ್ನು ಮುಲಾಜಿಲ್ಲದೆ ಹೇಳಿಕೊಳ್ಳುವಾಕೆ.

2014ರಲ್ಲಿ ಈಕೆ ಬರೆದ 15ನೇ ಕಾದಂಬರಿ, **'Books Of Jacob'** ಬಹುದೊಡ್ಡ ಸುದ್ದಿ ಮಾಡಿತ್ತು. 1000 ಪುಟಗಳ ಈ ಪುಸ್ತಕದ 1.7 ಲಕ್ಷ ಪ್ರತಿಗಳು ಮಾರಾಟವಾಗಿದ್ದು, ಒಂದಿಡೀ ವರ್ಷ ಪೋಲೆಂಡಿನ 'ಬೆಸ್ಟ್ ಸೆಲ್ಲರ್' ಪುಸ್ತಕವಾಗಿತ್ತದು. ವಿವಾದಾತ್ಮಕ, ಐತಿಹಾಸಿಕ ವ್ಯಕ್ತಿ ಜೇಕಬ್ ಫ್ರಾಂಕ್, ಯೆಹೂದಿ ಧರ್ಮದ ಭಿನ್ನಮತೀಯ. ಆತನ ಇತಿಹಾಸದ ಹಿನ್ನೆಲೆಯಲ್ಲೇ ಈ ರೋಚಕ ಕಾದಂಬರಿಯಿದೆ. ಈ ಕಾದಂಬರಿಯನ್ನು ಪ್ರಕಟಿಸಿದ ಬಳಿಕ ಈಕೆ ನೀಡಿದ ಸಂದರ್ಶನವೊಂದರಲ್ಲಿ ಯೆಹೂದಿ ಜನರ ಧಾರ್ಮಿಕ ಸ್ವಾತಂತ್ರ್ಯದ ಕುರಿತು ಹೇಳಿದ ಮಾತುಗಳು ವಿವಾದಕ್ಕೆ ಎಡೆಮಾಡಿಕೊಟ್ಟವು. ಈ ಮಾತುಗಳು ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ವಿರುದ್ಧವಿದೆಯೆಂಬ ಟೀಕೆಗಳು ಕೇಳಿಬಂದು, ಈಕೆಯ ಪ್ರಕಾಶಕರು ಕೆಲಕಾಲ ಈಕೆಗೆ ಭದ್ರತಾ ವ್ಯವಸ್ಥೆಯನ್ನೂ ಮಾಡಬೇಕಾಯಿತು. ಕಳೆದ 15 ವರ್ಷಗಳಿಂದ ಈಕೆಯ ಪುಸ್ತಕಗಳ ಇಂಗ್ಲಿಷ್ ಅನುವಾದಕಿ ಆಗಿರುವ ಜೆನಿಫರ್ ಕ್ರಾಫ್ಟ್, 'ಬುಕ್ಸ್ ಆಫ್ ಜೇಕಬ್' ಅನ್ನು ಇಂಗ್ಲಿಷಿಗೆ ಅನುವಾದಿಸುತ್ತಿದ್ದು 2021ರ ಮಾರ್ಚ್‌ನಲ್ಲಿ ಪುಸ್ತಕ ಬಿಡುಗಡೆಯಾಗುವ ನಿರೀಕ್ಷೆಯಿದೆ.

ಪ್ರಖರ ಸ್ತ್ರೀವಾದಿ ಓಲ್ಗಾ, ನಾನ್‌ವೆಜ್ ತಿನ್ನುವುದಿಲ್ಲ. ಅನುವಾದಕ ಗೆಳೆಯನ ಜೊತೆಗೆ ಹಳ್ಳಿಯೊಂದರಲ್ಲಿ ಈಕೆಯದ್ದು ಕೂಡಿಕೆ ಸಂಸಾರ. ತನ್ನ ಮನೆಯ ಬಳಿಯೇ ಪ್ರತಿವರ್ಷ ಸಾಹಿತ್ಯ ಮೇಳವೊಂದನ್ನೂ ನಡೆಸುತ್ತಿರುವ ಸಂಘಟಕಿ. ಈಕೆಗೆ ನೊಬೆಲ್ ಪ್ರಶಸ್ತಿ ಸಿಕ್ಕಿದ್ದನ್ನು ಯೂರೋಪಿನ ಪ್ರಮುಖ ಲೇಖಕಿಯರು ಸ್ವಾಗತಿಸಿದ್ದಾರೆ. ಅದಕ್ಕೆ ಕಾರಣ– ನೊಬೆಲ್ ಪ್ರಶಸ್ತಿ ಯಾವತ್ತೂ ಪುರುಷಪರ ಮತ್ತು ಯೂರೋಪಿಯನ್ನರ ಪರ– ಎನ್ನುವ ಸಕಾರಣ ಆರೋಪ. ಈವರೆಗೆ 116 ಮಂದಿಗೆ ನೊಬೆಲ್ ಪ್ರಶಸ್ತಿ ಸಿಕ್ಕಿದ್ದು, ಅದರಲ್ಲಿ 15 ಮಂದಿ ಮಾತ್ರ ಮಹಿಳೆಯರು.

ಸ್ವೀಡನ್ನಿನ ನೊಬೆಲ್ ಅಕಾಡೆಮಿಯನ್ನು ಮೂರನೇ ಗುಸ್ತಾವ್ ದೊರೆ 1786ರಲ್ಲಿ ಸ್ಥಾಪಿಸಿದ್ದು. ವರ್ಷಗಳು ಉರುಳಿದಂತೆ ಹಲವು ಬದಲಾವಣೆಗಳಾಗಿ ಈಗಿನ ಪ್ರತಿಷ್ಠಾನದ ರೂಪ ತಳೆದಿದೆಯದು. ಅತ್ಯಂತ ಸ್ವತಂತ್ರ, ನಿರ್ಭೀತ, ಪಾರದರ್ಶಕ ಪ್ರಶಸ್ತಿ ಎಂದೂ ಹೆಸರು ಪಡೆದಿದೆ. ಆದರೆ 1949ರ ಬಳಿಕ ಮೊದಲ ಬಾರಿಗೆ 2018ರಲ್ಲಿ ನೊಬೆಲ್ ಪ್ರಶಸ್ತಿ ಪ್ರಕಟವಾಗಲಿಲ್ಲ. ಅದಕ್ಕೆ ಕಾರಣ ಪ್ರತಿಷ್ಠಾನದ ಆಡಳಿತ ಮಂಡಳಿ ಸದಸ್ಯರ ವಿರುದ್ಧ ಲೈಂಗಿಕ ಹಲ್ಲೆ, ಪಕ್ಷಪಾತ, ಹಣದ ದುರ್ಬಳಕೆಯ ಆರೋಪ.

ಒಟ್ಟು 18 ಸದಸ್ಯರ ಪ್ರತಿಷ್ಠಾನವಿದು. ಈ ಸದಸ್ಯರ ಹೆಸರನ್ನು ಅವರಿಗೆ 50 ವರ್ಷವಾಗುವವರೆಗೆ ಬಹಿರಂಗಪಡಿಸುವಂತಿಲ್ಲ ಎನ್ನುವ ನಿಯಮವೂ ಇದೆ. ಕಳೆದ ವರ್ಷ ಪ್ರತಿಷ್ಠಾನದ ಒಬ್ಬ ಸದಸ್ಯೆಯಾದ ಕ್ಯಾಥರಿನಾ ಫ್ರಾಸ್ಟೆನ್‌ಸನ್‌ಳ ಗಂಡ, ಸ್ವೀಡನ್ನಿನ ಸಾಂಸ್ಕೃತಿಕ ವಲಯದಲ್ಲಿ ಸಾಕಷ್ಟು ಹೆಸರು ಮಾಡಿರುವ ಛಾಯಾಗ್ರಾಹಕ ಜೀನ್ ಕ್ಲಾಡ್ ಅರ್ನಾಲ್ಟ್ ವಿರುದ್ಧ ಆರೋಪಗಳು ಕೇಳಿಬಂದವು. ಅರ್ನಾಲ್ಟ್ ಲೈಂಗಿಕ ದೌರ್ಜನ್ಯ ನಡೆಸಿದ್ದಾಗಿ 18 ಮಹಿಳೆಯರು ಪತ್ರಿಕೆಯೊಂದರಲ್ಲಿ ನೀಡಿದ ಹೇಳಿಕೆ ಕೋಲಾಹಲ ಸೃಷ್ಟಿಸಿತು. ಆಂತರಿಕ ತನಿಖೆ ನಡೆಸಿದಾಗ 2005 ಮತ್ತು 2016ರಲ್ಲಿ ಪ್ರಶಸ್ತಿ ಪಡೆದವರ ಹೆಸರನ್ನು ಮುಂಚಿತವಾಗಿಯೇ ಬಹಿರಂಗಪಡಿಸಿದ ಅರ್ನಾಲ್ಟ್ ಮೇಲಿನ ಆರೋಪವೂ ಖಚಿತವಾಯಿತು. ಕೊನೆಗೆ ಪ್ರತಿಷ್ಠಾನದ ಶುದ್ಧೀಕರಣಕ್ಕೆ ಸದಸ್ಯರು ಸ್ವ ಇಚ್ಛೆಯಿಂದ ರಾಜೀನಾಮೆ ಕೊಡಬೇಕೆಂದು ನಿರ್ಧಾರವಾಯಿತು. ಆ ಹಿನ್ನೆಲೆಯಲ್ಲಿ ಕಳೆದ ವರ್ಷ ಕೆಲವರು ರಾಜೀನಾಮೆ ಕೊಟ್ಟಿದ್ದು ಆರು ಹೊಸ ಸದಸ್ಯರ ಆಯ್ಕೆಯೂ ಆಗಿದೆ. ಈಗ ಕ್ಲೀನ್ ಇಮೇಜ್‌ನೊಂದಿಗೆ ನೊಬೆಲ್ ಪ್ರತಿಷ್ಠಾನ 2018ರ ಪ್ರಶಸ್ತಿಯನ್ನು ಘೋಷಿಸಿದೆ. ಒಂದು ವರ್ಷ ತಡವಾದರೂ ಓಲ್ಗಾಗೆ ಅರ್ಹವಾಗಿಯೇ ಪ್ರಶಸ್ತಿ ಸಂದಿದೆ ಎನ್ನುವುದು ಸಾಹಿತ್ಯವಲಯದ ಹರ್ಷಭರಿತ ಪ್ರತಿಕ್ರಿಯೆ.

■ **ಹನಿ**



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65